ನನ್ನ ಓದು

# ದಾಟಿ ಬಾ ನಿರ್ಭಯದ ನಿಲುವಿಗೆ



**ಎಂ.ಎಸ್. ಆಶಾದೇವಿ**

ಯಾವ ಹಾಡ ಹಾಡಲಿ ಸುತ್ತಮುತ್ತ ಮನೆಮಠಗಳು ಹತ್ತಿಕೊಂಡು ಉರಿಯುವಲ್ಲಿ ಯಾವ ಹಾಡಿನಿಂದ ನಿಮಗೆ ನೆಮ್ಮದಿಯನು ನೀಡಲಿ...

ಜಿ.ಎಸ್. ಶಿವರುದ್ರಪ್ಪ ಅವರ ಈ ಉದ್ಗಾರ, ಅಥವಾ ಈ ನಿಟ್ಟುಸಿರಿನ ವಿಷಾದದ ಇತರ ಹಲವು ಉದ್ಗಾರಗಳು ಜಗತ್ತಿನಾದ್ಯಂತ ಪ್ರಜ್ಞಾವಂತರನ್ನು ಗಾಢವಾಗಿ ಕಾಡುತ್ತಿರುವ ಉಸಿರುಗಟ್ಟಿದ ಈ ವಾತಾವರಣದಲ್ಲಿ ಬಾನು ಅವರ ಬರವಣಿಗೆಗೆ ಸಿಕ್ಕ ಜಾಗತಿಕ ಮನ್ನಣೆಯು ಕೇವಲ ಸಾಹಿತ್ಯಕ ಪ್ರಶಸ್ತಿಯೆಂದು ಯಾರೂ ತಿಳಿಯಲಾರರು. ಈ ಪ್ರಶಸ್ತಿಯು ಕಾಡಿನ ಬೆಂಕಿಯನ್ನು ಆರಿಸಲು ಬಂದ ತಣ್ಣೀರಿನಂತೆಯೇ ಭಾಸವಾಗುತ್ತಿದೆ. ಮುಸುಕಿದೀ ಮಬ್ಬಿನಲ್ಲಿ ಕೈಹಿಡಿದು ನಡೆಸಬಲ್ಲ ಮಾನವೀಯ ಅಂತಃಕರಣಕ್ಕೂ, ನಾಗರಿಕ ವಿವೇಕಕ್ಕೂ ಸಿಕ್ಕ ಗೆಲುವೆಂದೇ ಇದನ್ನು ನೋಡಬೇಕು. ಹತ್ತಿಕೊಂಡು ಉರಿಯುತ್ತಿರುವ ಖಂಡಖಂಡಗಳನ್ನು ಶಾಂತಗೊಳಿಸಿ ಮತ್ತೆ ಜೀವನ್ಮುಖಿಯಾಗಿಸಬಲ್ಲ 'ಹಾಡನ್ನು' ಹಾಡುವ ಶಕ್ತಿ ಇರುವುದು ಸಾಹಿತ್ಯಕ್ಕೆ ಅಥವಾ ಕಲೆಗೆ ಎನ್ನುವ ಸತ್ಯವನ್ನು ಜಗತ್ತು ಅನುಮೋದಿಸಿದೆ ಎಂದೇ ಈ ಪ್ರಶಸ್ತಿಯನ್ನು ವ್ಯಾಖ್ಯಾನಿಸಬೇಕು. ಒಡೆಯುವುದು ರಾಜಕಾರಣದ ಹುನ್ನಾರವಾದರೆ ಕೂಡಿಸುವುದು ಕಲೆಯ ಮಹದಾಸೆ.

Literature is a glorious madness
but its a madness that our insane world
needs to revive its santity

ಇಂಗ್ಲಿಷ್ ಸಾಹಿತ್ಯವನ್ನು ಬಲು ಪ್ರೀತಿಯಿಂದ ನನಗೆ ಕಲಿಸಿದ ಡಾ. ಸೌಮಿತ್ರಾ ಚಕ್ರವರ್ತಿಯವರ ಈ ಮಾತುಗಳು ಈ ಸಂದರ್ಭದಲ್ಲಿ ಸಾಹಿತ್ಯವನ್ನು ಕುರಿತ ನಂಬಿಕೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿವೆ.

ಕನ್ನಡದ ಮುಖ್ಯ ಸಾಂಸ್ಕೃತಿಕ ಮತ್ತು ಸಾಮಾಜಿಕ ವ್ಯಕ್ತಿತ್ವವಾಗಿರುವ ಬಾನು ಅವರ ಬದುಕು ಮತ್ತು ಬರಹಗಳನ್ನು ಒಟ್ಟಾಗಿ ನೋಡಿದಾಗಲೇ ಅವು ಒಂದಕ್ಕೊಂದು ಪೂರಕವಾಗಿರುವ ಸಂಗತಿ